# SAHODAYA COMPLEX, BANGALORE
# PRE-BOARD EXAMINATION, 2018-19
# SUB: II LANGUAGE KANNADA
## ವಿಷಯ: ದ್ವಿತೀಯ ಭಾಷೆ ಕನ್ನಡ
## SET -1

**ತರಗತಿ : X** **ಗರಿಷ್ಟ ಅಂಕಗಳು:80**

**ಅವಧಿ: 3 ಗಂಟೆಗಳು**

**ಸೂಚನೆಗಳು:**

***ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.**

***ಈ ಪ್ರಶ್ನೆಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತದೆ.**

- **ವಿಭಾಗ 'ಎ' - ವಾಚನ ಮತ್ತು ಗ್ರಹಿಕಾ ಕೌಶಲ್ಯ - 12 ಅಂಕಗಳು**
- **ವಿಭಾಗ 'ಬಿ' - ಬರವಣಿಗೆ ಕೌಶಲ್ಯ - 15 ಅಂಕಗಳು**
- **ವಿಭಾಗ' ಸಿ' - ಅನ್ವಯಿಕ ವ್ಯಾಕರಣ - 18 ಅಂಕಗಳು**
- **ವಿಭಾಗ 'ಡಿ' - ಪಠ್ಯಗಳ ಅಧ್ಯಯನ - 35 ಅಂಕಗಳು**

***ಈ ಪ್ರಶ್ನೆ ಪತ್ರಿಕೆಯಲ್ಲಿ 6 ಮುದ್ರಿತ ಪುಟಗಳಿವೆ ಎಂಬುದನ್ನು ಪರಿಶೀಲಿಸಿ.**

***ದಯವಿಟ್ಟು ಈ ಪ್ರಶ್ನೆ ಪತ್ರಿಕೆಯಲ್ಲಿ 9 ಮುಖ್ಯ ಸೂಚನೆಗಳಿವೆ ಎಂಬುದನ್ನು ಗಮನಿಸಿ**

**ವಿಭಾಗ 'ಎ' ( ವಾಚನ ಮತ್ತು ಗ್ರಹಿಕಾ ಕೌಶಲ್ಯ ) ಅಂಕಗಳು - 12**

**I.1. ಈ ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ:- (6)**

ನಮ್ಮ ಜಗತ್ತು ಶೇ.¾ ರಷ್ಟು ಜಲಗೋಳದಲ್ಲಿ ಶೇ.¼ ಭೂಗೋಳದಲ್ಲಿದೆ. ಆದರೂ ಇದು ಮಿತಿ ಮೀರಿ ಜಾಗತಿಕ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಜನವಾಸ ಯೋಗ್ಯ ಭೂಭಾಗದ ತಾಪಮಾನದಿಂದ ಕೂಡಿರುವುದು ಸಾಮಾನ್ಯ ವಿಷಯದಂತೆ ತೋರಿ ಬರುತ್ತಿದೆಯಾದರೂ ಇದು ಕಡೆಗಣಿಸುವ ಮಾತಾಗಿರದೇ ಸೂಕ್ಷ್ಮತೆಯಿಂದ ಅವಲೋಕಿಸಬೇಕಾಗಿದೆ. ಇಂದು ಜಗತ್ತಿನ ತಾಪಮಾನ ಇಷ್ಟೊಂದು ಹೆಚ್ಚಾಗಲು ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಅದರಲ್ಲೂ ಪೆಟ್ರೋಲ್-ಡೀಸೆಲ್ ದಹಿಸಿ ಇಂಗಾಲವನ್ನು ಪರಿಸರಕ್ಕೆ ಬಿಡುತ್ತಿರುವುದರಿಂದ ಹಸಿರುಮನೆ ಪರಿಣಾಮಕ್ಕೆ ಕಾರಣವಾಗಿದೆ. ಇದರೊಂದಿಗೆ ತಂತ್ರಜ್ಞಾನ ಆಧಾರಿಸಿದ ಕೈಗಾರಿಕೆಗಳು ಉಗುಳುವ ಹೊಗೆ, ತ್ಯಾಜ್ಯ ಇತ್ಯಾದಿಗಳು ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿವೆ. ಅಣುಬಾಂಬ್ ತಯಾರಿಕೆ, ಮುಂತಾದವು ಜಾಗತಿಕ ತಾಪಮಾನ ಹೆಚ್ಚಾಗಲು ಕಾರಣವಾಗಿದೆ. ಭೂ

ವಾತಾವರಣದಲ್ಲಿರುವ ಓಝೋನ್ ಪದರದಲ್ಲಿ ರಂಧ್ರ ಉಂಟಾಗಲು ಕಾರಣವಾಗಿದೆ. ಭೂಮಿಯ ತಾಪಮಾನ ಏರಿದರೆ ಧ್ರುವ ಪ್ರದೇಶದಲ್ಲಿರುವ ಹಿಮ ಕರಗಿ ಭೂಮಿ ಪೂರ್ತಿ ಜಲಾವೃತವಾಗಿ ಜಲ ಪ್ರಳಯವೇ ಸಂಭವಿಸುವ ಸಾಧ್ಯತೆ ಇದೆ.

ಇತ್ತೀಚೆಗೆ ಪ್ಯಾರಿಸ್ ಸಮ್ಮೇಳನವು ಜಾಗತಿಕ ತಾಪಮಾನ ಇಳಿಸುವ ನಿಟ್ಟಿನಲ್ಲಿ ವಿಶ್ವದ 196 ರಾಷ್ಟ್ರಗಳು ಮಾಡಿದ ಪ್ರಯತ್ನ ಎನ್ನಬಹುದಾದರೂ ಅಲ್ಲಿ ಸ್ವೀಕರಿಸಿದ ನಿರ್ಣಯಗಳು ಜಾರಿಯಾದಾಗಲೇ ನಿಜವಾಗಿ ತಾಪಮಾನ ಇಳಿಸಲು ಮಾಡಿದ ಪ್ರಯತ್ನವು ಯಶಸ್ಸನ್ನು ಗಳಿಸಬಲ್ಲದು ಎಂದು ಹೇಳಬಹುದಾಗಿದೆ.

ಜಾಗತಿಕ ತಾಪಮಾನವನ್ನು ಸ್ವಲ್ಪಮಟ್ಟಿಗಾದರೂ ತಗ್ಗಿಸಲು ಮಾಡಬಹುದಾದ ಉಪಚಾರವೆಂದರೆ ಜನಸಂಖ್ಯೆ ನಿಯಂತ್ರಣ, ಕಾರ್ಬನ್ ಉತ್ಪಾದನೆಯಲ್ಲಿ ತಡೆ, ಪೆಟ್ರೋಲಿಯಂ ಪದಾರ್ಥಗಳ ದಹಿಸುವಿಕೆಯಲ್ಲಿ ಹಾಕಿಕೊಳ್ಳುವ ಮಿತಿ, ಹೆಚ್ಚು ಹೆಚ್ಚು ಅರಣ್ಯಗಳನ್ನು ಬೆಳೆಸುವುದು, ಇತ್ಯಾದಿಗಳಾಗಿವೆ. ಇದರಿಂದ ಸ್ವಲ್ಪಮಟ್ಟಿಗಾದರೂ ಜಾಗತಿಕ ತಾಪಮಾನವನ್ನು ಕಡಿಮೆ ಮಾಡಬಹುದು.

**ಪ್ರಶ್ನೆಗಳು:**

1. ಕಡೆಗಣಿಸುವ ಮಾತಾಗಿರದೇ ಯಾವುದನ್ನು ಸೂಕ್ಷ್ಮತೆಯಿಂದ ಅವಲೋಕಿಸಬೇಕಾಗಿದೆ? **(1)**
2. ಹಸಿರು ಮನೆ ಪರಿಣಾಮಕ್ಕೆ ಏನು ಕಾರಣವಾಗಿದೆ? **(1)**
3. ಭೂಮಿಯ ತಾಪಮಾನ ಏರಿದರೆ ಏನಾಗುವ ಸಾಧ್ಯತೆ ಇದೆ? **(1)**
4. ಜಾಗತಿಕ ತಾಪಮಾನದ ಇಳಿಸುವ ನಿಟ್ಟಿನಲ್ಲಿ ಎಲ್ಲಿ ಸಮ್ಮೇಳನ ನಡೆಯಿತು? **(1)**
5. ಜಾಗತಿಕ ತಾಪಮಾನ ತಗ್ಗಿಸುವ ನಿಟ್ಟಿನಲ್ಲಿ ಮಾಡಬಹುದಾದ ಉಪಚಾರಗಳೇನು? **(2)**

**I.2 ಈ ಕೆಳಗಿನ ಪದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ:- (6)**

ನಾ ಮೇಲಿನವನು ಬಲು ದೊಡ್ಡವನು ಎಂದು
ಮೆರೆದಾಡಬೇಡ ಗೆಳೆಯ
ನಿನಗಿಂತ ಮಿಗಿಲವರು ಇದ್ದಾರು ಭುವಿಯಲ್ಲಿ
ಸುಳ್ಳು ಭ್ರಮೆಯಲಿ ನೀ ಮುಳಗಬೇಡ

ಬಲುದೊಡ್ಡ ಚಂದಿರನು ಇರುಳೆಲ್ಲ ಬೆಳಗುವನು
ಮರೆಯಾಗುವನು ಹಗಲ ಕಿರಣದಲ್ಲಿ
ಉರಿಯುವನು ಸೂರ್ಯ ಅವರಿಗಿಂತ ಹಿರಿಯ
ಕಳೆದು ಹೋಗುವನು ಇರುಳ ಸೆರಗಿನಲ್ಲಿ

ಗ್ರಹತಾರೆಗಳ ಹೊತ್ತ ಗಗನಕ್ಕೆ ಮಿಗಿಲುಂಟೆ
ಸಾರಿ ಹೇಳಿತೆ ತಾ ಮಿಗಿಲು ಎಂದು
ಅಣುವಲ್ಲಿ ಅಣುವಾದ ಕಣ್ಣಿದ್ದು ಕುರುಡಾದ
ನೀ ಕೂಗಬಹುದು ಹಾಗೆಂದು

ಜನನ ಮರಣದ ಒಗಟ ಬಿಚ್ಚಿಹೇಳುವೆಯ ನೀನು
ಲೋಕದೊಳಿತಿಗೆ ನಿನ್ನ ಕಾಣ್ಕೆ ಏನು
ಹೇಳು ಗೆಳೆಯನೆ ಹೇಳು ಎದೆ ತಟ್ಟಿ ಹೇಳು
ಪ್ರಕೃತಿಯ ಹಿರಿತನಕೆ ನೀ ಸಾಟಿ ಏನು? **- ಬಿ.ಟಿ .ಲಲಿತಾನಾಯಕ್**

**ಪ್ರಶ್ನೆಗಳು:**

1. ಮಾನವ ಏನೆಂದು ಮೆರೆದಾಡಬಾರದು? (1)
2. ಹಗಲ ಕಿರಣದಲ್ಲಿ ಮರೆಯಾಗುವುದು ಯಾವುದು? (1)
3. ತಾನು ಮಿಗಿಲು ಎಂದು ಹೇಳದಿರುವುದು ಯಾವುದು? (1)
4. ಎದೆ ತಟ್ಟಿ ಏನು ಹೇಳಬೇಕು? (1)
5. ಜಂಬದಿಂದ ಮೆರೆದಾಡುವ ಮಾನವನಿಗೆ ಕವನದಲ್ಲಿ ಹಾಕಿರುವ ಸವಾಲು ಯಾವುದು? (2)

**ವಿಭಾಗ ' ಬಿ'( ಬರವಣಿಗೆ ಕೌಶಲ್ಯ) ಅಂಕಗಳು - 15**

**II.ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫ ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ :- (6)**

1) ರಾಷ್ಟ್ರೀಯ ಭಾವೈಕ್ಯತೆ 2) ತ್ಯಾಜ್ಯ ವಸ್ತು ನಿರ್ವಹಣೆ 3)ಭಯೋತ್ಪಾದನೆ

**III.ನಿಮ್ಮನ್ನು ಹೊಳೆನರಸೀಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ವಿಜಯ್/ ಸೌಮ್ಯ ಎಂದು ಭಾವಿಸಿ, ಕನ್ನಡ ವ್ಯಾಕರಣ ದೀಪಿಕೆ ಪುಸ್ತಕವನ್ನು ಕಳಿಸುವಂತೆ ಕೋರಿ ಸ್ವಪ್ನ ಬುಕ್ ಹೌಸ್, ಬೆಂಗಳೂರು ಇವರಿಗೆ ಒಂದು ಪತ್ರ ಬರೆಯಿರಿ.**

**ಅಥವಾ**

**ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಭುವನ್/ ಭುವನ ಎಂದು ಭಾವಿಸಿಕೊಂಡು, ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ ಚಾಮರಾಜನಗರದಲ್ಲಿರುವ ನಿಮ್ಮ ಸ್ನೇಹಿತ ಮಹೇಶನಿಗೆ ಒಂದು ಪತ್ರ ಬರೆಯಿರಿ.**
**(5)**

**IV. ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವದ ಆಚರಣೆಯ ಕುರಿತು ಒಂದು ವರದಿಯನ್ನು ಬರೆಯಿರಿ. (4)**

**ವಿಭಾಗ' ಸಿ' (ಅನ್ವಯಿಕ ವ್ಯಾಕರಣ) ಅಂಕಗಳು - 18**

**V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಗಳಿಗನುಸಾರ ಉತ್ತರ ಬರೆಯಿರಿ:-**

1.ಈ ಪದಗಳನ್ನು ಬಿಡಿಸಿ ಸಂಧಿ ಬರೆಯಿರಿ:- ಕೋಟ್ಯಧೀಶ್ವರ, ಜನೈಕ್ಯ **(2)**

2.ಈ ಪದಗಳನ್ನು ವಿಗ್ರಹಿಸಿ ಸಮಾಸ ಹೆಸರಿಸಿ- ಹಿಂದಲೆ, ಹಣೆಗಣ್ಣ (2)

3.ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ:- ಹುಕುಂ, ಕಸವರ **(1)**

4.ಈ ನುಡಿಗಟ್ಟನ್ನು ಬಳಸಿ ಸ್ವಂತವಾಕ್ಯವನ್ನು ರಚಿಸಿ: ಹೊಟ್ಟೆಯುರಿ, ಮೈಮುರಿ **(2)**

5.ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ:- ಪುಣ್ಯ, ಒಳಿತು **(1)**

6.ಈ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ: ಭೀಮನಿಗೆ, ಸಾವಿತ್ರಿಯತ್ತಣಿಂ **(1)**

7.ಈ ಪದಗಳಿಗೆ ತತ್ಸಮ/ ತತ್ಭವ ರೂಪ ಬರೆಯಿರಿ:- ವಂಶ, ಪ್ರಸಾದ **(1)**

8.ಈ ಪದಗಳ ಗ್ರಾಂಥಿಕ ರೂಪ ಬರೆಯಿರಿ: ಇಲ್ಲದ್ದಂಗ,ಮ್ಯಾಗ **(1)**

9.ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ: ಕಾಡು,ಕಾಲ **(1)**

10. ಮೊದಲೆರಡು ಪದಗಳಿಗೆ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ. **(1)**

I. ಬೇಗ ಬೇಗ : ದ್ವಿರುಕ್ತಿ :: ಮನೆಮಠ : ___________.

II. ಓದಿಯಾರು : ಸಂಭಾವನಾರ್ಥಕ :: ಮಾಡನು : _____________.

11.'ಶಾರದೆ ಸಂಗೀತವನ್ನು ಕಲಿಯುತ್ತಿದ್ದಾಳೆ ' ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಿಸಿ. **(1)**

12.ಅಯ್ಯೋ! ಹೀಗಾಗ ಬಾರದಿತ್ತು! ಈ ವಾಕ್ಯದಲ್ಲಿನ ಲೇಖನ ಚಿಹ್ನೆಯನ್ನು ಗುರುತಿಸಿ ಹೆಸರಿಸಿ. **(1)**

13.'ಭೀಮನು ಬಕನನ್ನು ಕೊಂದನು' ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿ. **(1)**

14. ಇವುಗಳಲ್ಲಿ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ:- **(2)**

- ಕುಳಿತು ತಿನ್ನುವವನಿಗೆ ಕುಡಿಕೆ ಹೊನ್ನು ಸಾಲದು .
- ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

**ವಿಭಾಗ 'ಡಿ' (ಪದ್ಯಗಳ ಅಧ್ಯಯನ) ಅಂಕಗಳು – 35**

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: (1x10=10)**

1. ಯುದ್ಧ ಕಥೆಯನ್ನು ಸಾ. ರಾ ಅಬೂಬಕ್ಕರ್ ರವರ ____________ ಕಥಾಸಂಕಲನದಿಂದ ಆಯ್ದು ಕೊಳ್ಳಲಾಗಿದೆ.

   (ಹುಟ್ಟಿದ ಕೂಸು, ಪಯಣ, ಚಪ್ಪಲಿಗಳು , ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು)

2. "ಪು.ತಿ.ನ" ರವರ ಹುಟ್ಟೂರು __________.

   (ಬಾಗೇವಾಡಿ, ಅಕ್ಕಿಹೆಬ್ಬಾಳ, ಮೇಲುಕೋಟೆ, ಕೋಳಿವಾಡ)

3. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ಹೊಂದಿರುವ ಕವಿ _________.

   (ಪಂಪ, ಕುಮಾರವ್ಯಾಸ, ಲಕ್ಷ್ಮೀಶ, ದುರ್ಗಸಿಂಹ)

4. ದ.ರಾ. ಬೇಂದ್ರೆಯವರ ___________ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

   (ಗರಿ, ಸಖೀಗೀತ, ಉಯ್ಯಾಲೆ, ನಾಕುತಂತಿ)

5. 'ವೆಸ್ಟ್ ಮಿನಿಸ್ಟರ್ ಅಬೆ' ಎಂಬುದು __________ .

   ( ಸ್ಟೇಷನರಿ, ಪ್ರಾರ್ಥನಾ ಮಂದಿರ,ವಸಾಹಿತಿನ ಕಚೇರಿ, ಅರಮನೆ)

6. ನಾಲ್ವಡಿ ಕೃಷ್ಣರಾಜ ಒಡೆಯರ್ ರವರಿಗೆ ರೀಜೆಂಟರಾಗಿ ಕೆಲಸ ಮಾಡಿದವರು ಮಹಾರಾಣಿ _________ ರವರು.

   ( ವಾಣಿ ವಿಲಾಸ, ಲಕ್ಷ್ಮಮ್ಮಣ್ಣಿ , ದೊಡ್ಡಮಣ್ಣಿ, ಲಿಂಗರಾಜಮ್ಮಣ್ಣಿ)"

7. 'ಸ್ವಧರ್ಮೇ ನಿಧನಂ ಶ್ರೇಯಃ'- ಈ ಮಾತು _________ ಯಲ್ಲಿ ವ್ಯಕ್ತವಾಗಿದೆ.

   (ಉಪನಿಷತ್, ರಾಮಾಯಣ, ತ್ರಿಪಿಟಕ, ಭಗವದ್ಗೀತೆ)

8. ಹಲಗಲಿ ಗ್ರಾಮ ಇರುವ ಜಿಲ್ಲೆ ____.

   ( ರಾಯಚೂರು, ಧಾರವಾಡ, ಬಾಗಲಕೋಟೆ, ಬೆಳಗಾವಿ)

9. 'ಸಾಹಸ ಭೀಮ ವಿಜಯಂ' ಕಾವ್ಯದ ಮತ್ತೊಂದು ಹೆಸರು _______.

   ( ಗದಾಯುದ್ಧ, ಗದುಗಿನ ಭಾರತ, ರನ್ನಕಂದ , ಜೈಮಿನಿ ಭಾರತ )

10. _______ ಗೆ ಭೂಮಿಜಾತೆ ಎಂಬ ಮತ್ತೊಂದು ಹೆಸರಿದೆ.

    ( ಶಬರಿ, ಸುಮಿತ್ರೆ, ಕೌಸಲ್ಯೆ,ಸೀತೆ )

**VII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ:-**

**(1x5=5)**

1. ಬಡತನ ಸುಂದರಿ ಹಾಗು ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?

2. ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಎಂದು ನಡೆಯಿತು?

3. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

4. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿರುವವರು ಯಾರು?

5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

**VIII. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ:-** **(3x4=12)**

1. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

2. " ಮಾರಿಗೌತಣವಾಯ್ತು ನಾಳಿನ ಭಾರತವು " ಈ ಮಾತನ್ನು ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

"ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು" ಈ ಮಾತನ್ನು ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

3. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?

4. "ಜಾನಕಿಯ ಮಗನಿದಕೆ ಬೆದರುವನೆ?" ಈ ಮಾತನ್ನು ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

" ಅವಂತಿ ಸುಕುಮಾರನೆಂದು ಪೆಸರನಿಟ್ಟಂ " ಈ ಮಾತನ್ನು ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

**IX. ಕೆಳಗಿನ ಪ್ರಶ್ನೆಗಳಿಗೆ 7-8 ವಾಕ್ಯಗಳಲ್ಲಿ ಉತ್ತರಿಸಿರಿ:-** **(4x2=8)**

1. ದುಷ್ಟ ಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾದ ಬಗೆಯನ್ನು ತಿಳಿಸಿ.

**ಅಥವಾ**

ಪಾಂಡವರು ತನ್ನ ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

2. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು' ರಾಜ್ಯ ಹೇಗಾಯಿತು?

**ಅಥವಾ**

ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**************************************

**KANNADA LANGUAGE ( CODE: 015)**

**CLASS : 10 (2018 & 19 )**

**TIME : 3 Hrs** **SET-1** **TOTAL: 80 Marks**

**The question paper will be divided into four sections:-**

| | | |
|---|---|---|
| Section A | Reading comprehension | 12 Marks |
| Section B | Writing | 15 Marks |
| Section C | Grammar | 18 marks |
| Section D | Literature | 35 marks |

| Sl.No. | Types of questions | No. of questions | No.of marks per questions | Total No.of marks |
|---|---|---|---|---|
| 1. | VSA | 14 | 1 / 2 | 07 |
| 2. | MCQ | 10 | 01 | 10 |
| 3. | SAQ | 22 | 01 | 22 |
| 4. | SAQ | 03 | 02 | 06 |
| 5. | SAQ | 04 | 03 | 12 |
| 6. | LAQ | 03 | 04 | 12 |
| 7. | LAQ | 01 | 05 | 05 |
| 8. | LAQ | 01 | 06 | 06 |
| | | 58 | TOTAL - | 80 |